<u>ಪತ್ರಿಕಾ ಪ್ರಕಟಣೆ</u>

# **ಬಿ.ಪ್ಯಾಕ್ ಸಂಸ್ಥೆಯಿಂದ ಬೆಂಗಳೂರಿನ 3 ಲೋಕಸಭಾ ಕ್ಷೇತ್ರಗಳ ಸಂಸದರ** ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ನಿಧಿ ಬಳಕೆಯ ವರದಿ ಬಿಡುಗಡೆ

***# ಪ್ರಜಾಪ್ರಭುತ್ವದ ಕೆಲಸ ಮಾಡೋಣ***

ಬೆಂಗಳೂರು, ಗುರುವಾರ, ಏಪ್ರಿಲ್ 04, 2019

ಬೆಂಗಳೂರು ರಾಜಕೀಯ ಕಾರ್ಯ ಸಮಿತಿಯು (ಬಿಪ್ಯಾಕ್) ತನ್ನ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ 2014-15 ರಿಂದ 2018-19ವರೆಗಿನ ಲೋಕಸಭಾ ಸದಸ್ಯರ ನಿಧಿ ಬಳಕೆಯ ವರದಿಯನ್ನು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಬಿಡುಗಡೆ ಮಾಡಿತು. ಬಿ.ಪ್ಯಾಕ್ ಕೈಗೊಂಡ ಈ ಅಧ್ಯಯನದಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ 3 ಲೋಕಸಭಾ ಕ್ಷೇತ್ರಗಳಲ್ಲಿ ವಿವಿಧ ಅಭಿವೃದ್ಧಿ ಚಟುವಟಿಕೆಗಳಡಿ ಸಂಸತ್ ಸದಸ್ಯರು ಮಾಡಿರುವ ವೆಚ್ಚದ ಮಾದರಿಯನ್ನು ಗಮನಿಸಬಹುದಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯ 3 ಲೋಕಸಭಾ ಕ್ಷೇತ್ರಗಳಲ್ಲಿ ಸಂಬಂಧಿಸಿದ ಸಂಸತ್ ಸದಸ್ಯರು ತಮ್ಮ ನಿಧಿಯಡಿ 2014-15, 2015-16, 2016-17, 2017-18 ರವರೆಗಿನ ಹಣಕಾಸು ವರ್ಷಗಳಲ್ಲಿ ಮಾಡಿದ ವೆಚ್ಚದ ವಿವರಗಳನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯಿಂದ ಸಂಗ್ರಹಿಸಲಾಗಿದೆ. ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಲೋಕಸಭಾ ಸದಸ್ಯರ ನಿಧಿ ಬಳಕೆಯ ಸಂಬಂಧದಲ್ಲಿ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ವಯ ವರ್ಗೀಕರಿಸಲಾಗಿದೆ. ಪ್ರತಿ ಕ್ಷೇತ್ರಗಳಲ್ಲಿಯೂ ಸಂಸತ್ ಸದಸ್ಯರು ಮಾಡಿರುವ ಕಾರ್ಯಕ್ರಮ ಆಧಾರಿತ ವೆಚ್ಚದ ವಿವರ ಹಾಗೂ ಶೇಕಡಾವಾರು ಬಳಕೆಯನ್ನು ಲೆಕ್ಕಹಾಕಲಾಗಿದೆ.

## <u>ಲೋಕಸಭಾ ಸದಸ್ಯರ ನಿಧಿ ಬಳಕೆ ಎಂದರೇನು?</u>

ಲೋಕಸಭಾ ಸದಸ್ಯರ ವ್ಯಾಪ್ತಿಯ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಹೊಣೆಗಾರಿಕೆಯೊಂದಿಗೆ ಲೋಕಸಭಾ ಸದಸ್ಯರ ನಿಧಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ, ಪ್ರತಿ ಲೋಕಸಭಾ ಸದಸ್ಯರೂ ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ವಾರ್ಷಿಕ ರೂ 5 ಕೋಟಿಗಳವರೆಗೆ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಬಹುದಾಗಿದೆ.

ಸಂಪೂರ್ಣ ಪ್ರಕ್ರಿಯೆಯಲ್ಲಿ ಮೂವರು ಪ್ರಮುಖ ಪಾಲುದಾರರಿರುತ್ತಾರೆ: ಲೋಕಸಭಾ ಸದಸ್ಯರು, ಜಿಲ್ಲಾ ಆಡಳಿತ ಮತ್ತು ಭಾರತ ಸರ್ಕಾರ. ಸ್ಥಳೀಯ ಆದ್ಯತೆಗಳನ್ನು ಆಧರಿಸಿ, ಕುಡಿಯುವ ನೀರು ಪೂರೈಕೆ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ನೀರಾವರಿ, ರಸ್ತೆ ಮುಂತಾದ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಲೋಕಸಭಾ ಸದಸ್ಯರು ತಮ್ಮ ವ್ಯಾಪ್ತಿಯ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಶಿಫಾರಸು ಮಾಡುತ್ತಾರೆ. ಲೋಕಸಭಾ ಸದಸ್ಯರ ಶಿಫಾರಸಿನಂತೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅರ್ಹ ಕಾಮಗಾರಿಗಳನ್ನು ಮಂಜೂರು ಮಾಡುತ್ತಾರಲ್ಲದೆ, ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಹೊಣೆಯನ್ನು ಹೊರುತ್ತಾರೆ. ಅಧಿಕೃತ ಮಾರ್ಗಸೂಚಿಗಳ ಪ್ರಕಾರ, ಜಿಲ್ಲಾಧಿಕಾರಿಗಳು ಸಂಸದರ ಶಿಫಾರಸು ಮಾಡುವ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಅನುಷ್ಠಾನ ಸಂಸ್ಥೆಯನ್ನು ಆಯ್ಕೆ ಮಾಡುತ್ತಾರೆ. ಭಾರತ ಸರ್ಕಾರವು ಪ್ರತಿ ಲೋಕಸಭಾ ಸದಸ್ಯರಿಗೆ ಸಂಬಂಧಿಸಿದಂತೆ ವಾರ್ಷಿಕ 5 ಕೋಟಿ ರೂ.ಗಳನ್ನು ಎರಡು ಸಮಾನ ಕಂತಿನಲ್ಲಿ ನೇರವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತದೆ.

MPLAD
Let's Make Democracy Work

B.PAC
Let's Be Better

2014-15 ರಿಂದ 2017-18ರವರೆಗೆ ಲೋಕಸಭಾ ಸದಸ್ಯರ ವ್ಯಾಪ್ತಿಯ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಲಾದ ಮುಖ್ಯ ಕಾರ್ಯಕ್ರಮಗಳ ಅಧ್ಯಯನ

| | *ಡಿ.ವಿ.ಸದಾನಂದಗೌಡ<br>ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ* | *ಪಿ.ಸಿ.ಮೋಹನ್<br>ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ* | *ದಿ. ಹೆಚ್.ಎನ್. ಅನಂತಕುಮಾರ್<br>ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ* |
|---|---|---|---|
| ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಸಂಸದರು ಮಾಡಿದ ಒಟ್ಟು ವೆಚ್ಚ (ಕೋಟಿ ರೂ.ಗಳಲ್ಲಿ) | *20.04* | *19.05* | *16.44* |
| ***ಶೇಕಡಾವಾರು ಬಳಕೆ*** | *100%* | *95%* | *82%* |
| ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಮಾಡಲಾದ ಆದ್ಯತಾ ವೆಚ್ಚ (ಕೋಟಿ ರೂ.ಗಳಲ್ಲಿ) | *ನೀರು ಸರಬರಾಜು ರೂ. 6.36<br>ಮೂಲಭೂತ ಸೌಲಭ್ಯ ರೂ. 6.15<br>ಕ್ರೀಡೆ ಮತ್ತು ಯುವಜನಸೇವೆ ರೂ. 2.76<br>ಶಿಕ್ಷಣ ರೂ. 1.29<br>ಶಿಶು ಹಾಗೂ ಮಹಿಳಾ ಅಭಿವೃದ್ಧಿ ರೂ. 0.86* | *ಆರೋಗ್ಯ & ಕುಟುಂಬ ಕಲ್ಯಾಣ ರೂ. 3.73<br>ನೀರು ಸರಬರಾಜು ರೂ. 2.94<br>ರೈಲ್ವೆ ಸೌಲಭ್ಯ ರೂ. 2. 86<br>ಸಾರ್ವಜನಿಕ ಸೌಲಭ್ಯ ರೂ. 2.42<br>ಶಿಶು ಹಾಗೂ ಮಹಿಳಾ ಅಭಿವೃದ್ಧಿ ರೂ. 1.76* | *ನೀರು ಸರಬರಾಜು ರೂ. 5.13<br>ಸಾರ್ವಜನಿಕ ಸೌಲಭ್ಯ ರೂ. 2.91<br>ಟ್ರಸ್ಟ್ ಮತ್ತು ಸಂಸ್ಥೆಗಳು ರೂ. 2.10<br>ಶಿಕ್ಷಣ ರೂ. 1.68<br>ಯೋಗಕೇಂದ್ರ ರೂ. 1.22* |
| *ಮುಖ್ಯ ಯೋಜನೆಗಳು* | *ಮಲ್ಲೇಶ್ವರದಲ್ಲಿ ವಾಲಿಬಾಲ್ ಮತ್ತು ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ ನಿರ್ಮಾಣ: ರೂ. 2.15 ಕೋಟಿ<br><br>ಆರ್.ಸಿ.ಸಿ ಚರಂಡಿಗಳು ಮತ್ತು ರಸ್ತೆಗಳ ಡಾಂಬರೀಕರಣ: ರೂ. 0.70 ಕೋಟಿ* | *ಐಟಿಪಿಎಲ್ ಬಳಿ ತಂಗುದಾಣ ಮತ್ತು ಕಾಲುದಾರಿ ಸೇತುವೆ ನಿರ್ಮಾಣ: ರೂ 2.86 ಕೋಟಿ<br><br>ವಾಣಿವಿಲಾಸ ಹಾಗೂ ವಿಕ್ಟೋರಿಯಾ ಆಸ್ಪತ್ರೆಗಳಿಗೆ ವೈದ್ಯಕೀಯ ಸಲಕರಣೆಗಳ ಸರಬರಾಜು: ರೂ 3.86 ಕೋಟಿ* | *ವಿಜಯನಗರದಲ್ಲಿ ಕೃಷ್ಣದೇವರಾಯ ತಂಗುದಾಣ ನಿರ್ಮಾಣ: ರೂ. 0.70 ಕೋಟಿ<br>ವಿವಿಧೋದ್ದೇಶ ಸಭಾಂಗಣಗಳ ನಿರ್ಮಾಣ: ರೂ. 1.75 ಕೋಟಿ* |

## ವಿಧಾನಸಭಾ ಕ್ಷೇತ್ರವಾರು ವೆಚ್ಚ

| ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ | | ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ | | ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ | |
|---|---|---|---|---|---|
| (ರೂ. ಕೋಟಿಗಳಲ್ಲಿ) | | | | | |
| ವಿಧಾನಸಭಾ ಕ್ಷೇತ್ರ | ಒಟ್ಟು | ವಿಧಾನಸಭಾ ಕ್ಷೇತ್ರ | Total | ವಿಧಾನಸಭಾ ಕ್ಷೇತ್ರ | Total |
| ಕೆ.ಆರ್.ಪುರ | ₹1.87 | ಗೋವಿಂದರಾಜನಗರ | ₹ 1.45 | ಸರ್ವಜ್ಞನಗರ | ₹ 2.20 |
| ಬ್ಯಾಟರಾಯನಪುರ | ₹1.16 | ವಿಜಯನಗರ | ₹ 2.61 | ಶಿವಾಜಿನಗರ | ₹ 1.20 |
| ಯಶವಂತಪುರ | ₹2.17 | ಚಿಕ್ಕಪೇಟೆ | ₹ 2.37 | ಶಾಂತಿನಗರ | ₹ 1.00 |
| ದಾಸರಹಳ್ಳಿ | ₹1.24 | ಬಸವನಗುಡಿ | ₹ 4.03 | ಗಾಂಧಿನಗರ | ₹ 2.01 |
| ಮಹಾಲಕ್ಷ್ಮಿ ಬಡಾವಣೆ | ₹1.80 | ಪದ್ಮನಾಭನಗರ | ₹ 1.51 | ರಾಜಾಜಿನಗರ | ₹ 1.35 |
| ಮಲ್ಲೇಶ್ವರ | ₹2.33 | ಬಿಟಿಎಂ ಬಡಾವಣೆ | ₹ 1.74 | ಚಾಮರಾಜಪೇಟೆ | ₹ 5.29 |
| ಹೆಬ್ಬಾಳ | ₹2.51 | ಜಯನಗರ | ₹ 1.03 | ಮಹದೇವಪುರ | ₹ 3.88 |
| ಪುಲಕೇಶಿನಗರ | ₹1.41 | ಬೊಮ್ಮನಹಳ್ಳಿ | ₹ 1.70 | ಸಿ.ವಿ.ರಾಮನ್ ನಗರ | ₹ - |
| ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿ | ₹5.55 | | | ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿ | ₹ 2.12 |
| **ಒಟ್ಟು** | ₹20.04 | **ಒಟ್ಟು** | **₹ 16.44** | **ಒಟ್ಟು** | **₹ 19.05** |
| 4 ವರ್ಷಗಳ ಒಟ್ಟು ನಿಧಿ ಬಳಕೆ | ₹20.00 | 4 ವರ್ಷಗಳ ಒಟ್ಟು ನಿಧಿ ಬಳಕೆ | ₹ 20.00 | 4 ವರ್ಷಗಳ ಒಟ್ಟು ನಿಧಿ ಬಳಕೆ | ₹ 20.00 |

*ಮೂಲ: ಬೆಂಗಳೂರು ನಗರ ಜಿಲ್ಲಾಧಿಕಾರಿಗಳು*

ಪ್ರಮುಖ ಅಂಶಗಳು:

- ★ ಒಟ್ಟು ಲಭ್ಯತೆ: 60ಕೋಟಿ ರೂ; ಒಟ್ಟು ಬಳಕೆ: 55.53 ಕೋಟಿ ರೂ; ಬಳಕೆ: 92%
- ★ ಬೆಂಗಳೂರು ಉತ್ತರ (100% ಬಳಕೆ); ಬೆಂಗಳೂರು ಕೇಂದ್ರ (95% ಬಳಕೆ); ಬೆಂಗಳೂರು ದಕ್ಷಿಣ (82% ಬಳಕೆ)
- ★ ಮೂರೂ ಕ್ಷೇತ್ರಗಳಲ್ಲಿ ನಾಗರಿಕ ಆದ್ಯತಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ
- ★ ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 86 ರಷ್ಟು ನಿಧಿ ಬಳಕೆಯಾಗಿದ್ದರೆ, ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿ ಶೇ 14 ರಷ್ಟು ನಿಧಿ ಬಳಕೆ
- ★ ಮೂರೂ ಕ್ಷೇತ್ರಗಳಲ್ಲಿ ಆದ್ಯತೆ ನೀಡಲಾದ ಅನುದಾನಗಳು: ಕುಡಿಯುವ ನೀರು ಹಾಗೂ ನೀರು ಮೂಲಸೌಕರ್ಯ (25.98%), ಮೂಲಸೌಕರ್ಯ ಅಭಿವೃದ್ಧಿ (12.62%), ಸಾರ್ವಜನಿಕ ಸೌಲಭ್ಯಗಳು (10.78%).
- ★ ಅತಿ ಹೆಚ್ಚು ಅನುದಾನ ಪಡೆದುಕೊಂಡ ವಿಧಾನಸಭಾ ಕ್ಷೇತ್ರಗಳು: ಬೆಂಗಳೂರು ಉತ್ತರದಲ್ಲಿ ಹೆಬ್ಬಾಳ 13%, ಬೆಂಗಳೂರು ದಕ್ಷಿಣದಲ್ಲಿ ಬಸವನನಗುಡಿ 25%, ಬೆಂಗಳೂರು ಕೇಂದ್ರ ಕ್ಷೇತ್ರದಲ್ಲಿ ಚಾಮರಾಜಪೇಟೆ 28%.

## <u>ಬೆಂಗಳೂರು ರಾಜಕೀಯ ಕಾರ್ಯಸಮಿತಿ (ಬಿ.ಪ್ಯಾಕ್) ಕುರಿತಂತೆ</u>

ಬೆಂಗಳೂರು ನಗರದಲ್ಲಿ ಉತ್ತಮ ಆಡಳಿತದ ಗುರಿಯನ್ನಿರಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ರಾಜಕೀಯ ಕಾರ್ಯಸಮಿತಿಯು (ಬಿ.ಪ್ಯಾಕ್) ಬದ್ಧತೆಯನ್ನು ಹೊಂದಿದ ನಾಗರಿಕರನ್ನು ಒಳಗೊಂಡ ಪ್ರತಿಫಲಾಪೇಕ್ಷೆಯಿಲ್ಲದೆ ಉತ್ತಮ ಬೆಂಗಳೂರು ನಿರ್ಮಾಣದ ಆಶಯವನ್ನಿರಿಸಿಕೊಂಡ ಟ್ರಸ್ಟ್. ರಾಜಕೀಯ ಮುಖಂಡತ್ವದೊಂದಿಗೆ ನಾಗರಿಕರ ಉತ್ತಮ ಪಾಲ್ಗೊಳ್ಳುವಿಕೆಯ ಮೂಲಕ ಉತ್ತಮ ಆಡಳಿತವನ್ನು ತರುವ ಸಲುವಾಗಿ ಬಿ.ಪ್ಯಾಕ್ ಕಾರ್ಯನಿರ್ವಹಿಸುತ್ತಿದೆ.

ಬೆಂಗಳೂರು ರಾಜಕೀಯ ಕಾರ್ಯಸಮಿತಿ (ಬಿ.ಪ್ಯಾಕ್) ಆರಂಭಗೊಂಡ ದಿನದಿಂದಲೂ ತನ್ನ ನಾಗರಿಕರಿಗಾಗಿ ಉತ್ತಮ ಬೆಂಗಳೂರು ರೂಪಿಸಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಮತಪಟ್ಟಿಯಲ್ಲಿ ಹೆಸರು ನೋಂದಾವಣೆ, ಬೆಂಗಳೂರಿಗಾಗಿ ಕಾರ್ಯಸೂಚಿ, ಚುನಾವಣ ಅಭ್ಯರ್ಥಿಗಳ ಸಮ್ಮತಿ, ಶಾಸಕರ ವಾಗ್ದಾನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಶರತ್ ಎಸ್.ಆರ್ sharath@bpac.in +91-9886196640
ಸಚಿನ್ ತಂತ್ರಿ | communication@bpac.in| +91- 9740511162
ರಾಘವೇಂದ್ರ ಹೆಚ್.ಎಸ್| aghavendra@bpac.in | +91- 9739328099